Online Newspaper Clipping Service

**Dated, Monday 13th February – 2017**

ವಿಜಯವಾಣಿ

**Pg.No.01**

# ಇನ್ನು ಆನ್‌ಲೈನಲ್ಲೇ ನಡೆಯಲಿದೆ ಸಿಇಟಿ ದಾಖಲೆ ಪರಿಶೀಲನೆ

## ಈ ವರ್ಷದಿಂದಲೇ ಜಾರಿಗೆ ನಿರ್ಧಾರ

ದೇವರಾಜ್ ಎಲ್. ಬೆಂಗಳೂರು

ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ಮೂಲಕ ಸೀಟು ಪಡೆಯುವ ಅಭ್ಯರ್ಥಿಗಳನ್ನು ದಾಖಲಾತಿ ಪರಿಶೀಲನೆಗಾಗಿ ಗಂಟೆಗಟ್ಟಲೆ ಸರದಿ ನಿಲ್ಲುವುದಕ್ಕೆ ಫುಲ್‌ಸ್ಟಾಪ್ ಬೀಳಲಿದೆ. ವಿದ್ಯಾರ್ಥಿಗಳ ಬವಣೆಗಳಿಗೆ ಬ್ರೇಕ್ ಹಾಕಲು ಮುಂದಾಗಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಈ ವರ್ಷದಿಂದಲೇ ಆನ್‌ಲೈನ್ ಮೂಲಕ ದಾಖಲಾತಿ ಪರಿಶೀಲನೆ ನಡೆಸಲು ನಿರ್ಧರಿಸಿದೆ.



- ಸರದಿ ಸಾಲಲ್ಲಿ ನಿಲ್ಲುವ ಸಂಕಷ್ಟ ಇನ್ನಿಲ್ಲ
- ಮೇ 2ರಂದು ಸಿಇಟಿ ಪರೀಕ್ಷೆ ಆರಂಭ

ಇದಕ್ಕಾಗಿ ಈಗಾಗಲೇ ಪ್ರಯೋಗಾರ್ಥ ಪರೀಕ್ಷೆಯನ್ನು ಕೆಇಎ ಯಶಸ್ವಿಯಾಗಿ ನಡೆಸಿದೆ. ಅಭ್ಯರ್ಥಿಗಳು ದಾಖಲಾತಿಗಳ ಪ್ರಮಾಣ ಪತ್ರಗಳಿಗೆ ನೀಡುವ ಸಂಖ್ಯೆ ನೀಡಿದಲ್ಲಿ ಅಧಿಕಾರಿಗಳೇ ಪ್ರಮಾಣಪತ್ರ ನೈಜತೆ ಪರಿಶೀಲಿಸಿ ಸೀಟು ಪಡೆಯಲು ಅವಕಾಶ ಕಲ್ಪಿಸಿಕೊಡಲಿದ್ದಾರೆ.

**ಹಾಜರಾತಿ ಕಡ್ಡಾಯ:** ಆನ್‌ಲೈನ್ ಎಂದ ಮಾತ್ರಕ್ಕೆ ಮನೆಯಲ್ಲೇ ಕುಳಿತು ಪರಿಶೀಲನೆಯಲ್ಲಿ ಭಾಗಿಯಾಗುವಂತಿಲ್ಲ. ಪ್ರಕ್ರಿಯೆಗೆ ಭೌತಿಕ ಹಾಜರಾತಿ ಕಡ್ಡಾಯ. ನಕಲಿ ಪ್ರಮಾಣಪತ್ರಗಳ ಹಾವಳಿ ತಪ್ಪಿಸಲು ಆನ್‌ಲೈನ್ ಮಾರ್ಗಕ್ಕೆ ಮೊರೆ ಹೋಗಿದ್ದು, ತಂತ್ರಾಂಶ ರೂಪಿಸುವ ಜವಾಬ್ದಾರಿಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ವಹಿಸಿಕೊಂಡಿದೆ. ಕಳೆದ ವರ್ಷವೇ ಆನ್‌ಲೈನ್ ಪರಿಶೀಲನೆಗೆ ಕೆಇಎ ಸಿದ್ಧತೆ ನಡೆಸಿತ್ತಾದರೂ ತಾಂತ್ರಿಕ ದೋಷದಿಂದಾಗಿ ಸಾಧ್ಯವಾಗಿರಲಿಲ್ಲ. ಇದೀಗ ಮತ್ತೆ ಪ್ರಯತ್ನ ಆರಂಭಿಸಿರುವ ಕೆಇಎ ಕಂದಾಯ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯೊಂದಿಗೆ ಚರ್ಚೆ ಆರಂಭಿಸಿದೆ.

ಪುಟ 5B

### ಹೇಗೆ ನಡೆಯುತ್ತೆ ಪರಿಶೀಲನೆ?

ಸಿಇಟಿ ಸೀಟು ಹಂಚಿಕೆಗೆ ಹಲವು ಅಂಕಪಟ್ಟಿ, ಸಿಇಟಿ ರ್‍ಯಾಂಕ್, ಜಾತಿ ಮತ್ತು ಆದಾಯ ಪ್ರಮಾಣಪತ್ರ, 317 ಜೆ, ಕನ್ನಡ ಮಾಧ್ಯಮ ಹಾಗೂ ಗ್ರಾಮೀಣ ಅಭ್ಯರ್ಥಿಯ ಪ್ರಮಾಣ ಪತ್ರ ಅವಶ್ಯಕ. ಹಲವು ಅಂಕಪಟ್ಟಿಯ ಸಂಪೂರ್ಣ ದತ್ತಾಂಶದ ಸಾಫ್ಟ್ ಕಾಪಿ ಸಿಇಟಿಗೆ ಲಭ್ಯವಾಗುವುದರಿಂದ ಅಂಕಗಳ ಪರಿಶೀಲನೆ ಸುಲಭವಾಗಿ ನಡೆಯಲಿದೆ.

ಆನ್‌ಲೈನ್ ಪ್ರಕ್ರಿಯೆಗೆ ಸಿದ್ಧತೆ ನಡೆಯುತ್ತಿದೆ. ಬಹುತೇಕ ಈ ವರ್ಷದಿಂದಲೇ ಆನ್‌ಲೈನ್‌ನಲ್ಲಿ ದಾಖಲಾತಿಗಳ ಪರಿಶೀಲನೆ ನಡೆಸುತ್ತೇವೆ.

। ಗಂಗಾಧರಯ್ಯ, ಆಡಳಿತಾಧಿಕಾರಿ, ಕೆಇಎ

### ಆಫ್‌ಲೈನೂ ಇದೆ

ಏಕಾಏಕಿ ಆನ್‌ಲೈನ್ ದಾಖಲಾತಿ ಪರಿಶೀಲನೆಯಿಂದ ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂಬ ಉದ್ದೇಶದಿಂದ, ಆಫ್‌ಲೈನ್‌ನಲ್ಲೂ ದಾಖಲಾತಿ ಪರಿಶೀಲನೆಗೆ ಅವಕಾಶವಿದೆ. ಹೊರನಾಡು ಮತ್ತು ಗಡಿನಾಡು ಕನ್ನಡಿಗರ ಅಂಕಪಟ್ಟಿಗಳ ದತ್ತಾಂಶವನ್ನು ಕೆಇಎ ಪಡೆದುಕೊಳ್ಳಲು ಸಾಧ್ಯವಿಲ್ಲದಿರುವುದರಿಂದ ಇವರಿಗೆ ಆಫ್‌ಲೈನ್ ಪರಿಶೀಲನೆ ಅನಿವಾರ್ಯವಾಗಿದೆ.

ವಿಜಯವಾಣಿ



# ಆನ್‌ಲೈನಲ್ಲೇ ಸಿಇಟಿ ದಾಖಲೆ ಪರಿಶೀಲನೆ

ಮೊದಲ ಪುಟದಿಂದ...

ಹೊಸದಾಗಿ ಮಾಡಿಸಿ: ಆನ್‌ಲೈನ್ ಪ್ರಕ್ರಿಯೆಗೆ ಹೊಸ ಪ್ರಮಾಣಪತ್ರದ ಅವಶ್ಯಕತೆ ಇದ್ದು, ಗ್ರಾಮೀಣ ಹಾಗೂ ಕನ್ನಡ ಮಾಧ್ಯಮ ಪ್ರಮಾಣಪತ್ರಗಳನ್ನು ಹೊಸದಾಗಿ ಮಾಡಿಸಬೇಕಾಗುತ್ತದೆ. ಆನ್‌ಲೈನ್ ಪ್ರಕ್ರಿಯೆ ಆರಂಭಗೊಂಡ ಬಳಿಕ ನಾಲ್ಕೈದು ಶಾಲೆಯಲ್ಲಿ ವ್ಯಾಸಂಗ ಮಾಡಿರುವ ಅಭ್ಯರ್ಥಿಗಳು ಆಯಾ ಕ್ಷೇತ್ರ ಬಿಇಒ ಕಚೇರಿಗೆ ಅಲೆದಾಡಿ ಸಹಿ ಪಡೆದುಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಇದಕ್ಕೂ ಕೂಡ ಹೊಸ ಸಂಖ್ಯೆ ನೀಡುವ ಚಿಂತನೆ ನಡೆಯುತ್ತಿದೆ.